ಅಮರಯ್ಯಾ ಪತ್ರಿಮಠ, ಸುರಪುರ
ಭೂಮಿಯ ಋಣ ತೀರಿಸುವುದು ಹೇಗೆ?



ಮುಂದಿನ ಪೀಳಿಗೆಗೆ ಸ್ವಚ್ಛ ಪರಿಸರವನ್ನು ನೀಡುವ ಮೂಲಕ.

ವಿ.ಎಸ್. ಹಿಂದೂಪುರ, ಬಳ್ಳಾರಿ
ಸಹನೆ ಇಲ್ಲದಿದ್ದರೆ ಹೆಣ್ಣು ಬಾಳುವುದು ಕಷ್ಟ ಎನ್ನುತ್ತಿದ್ದರು. ಈಗ?
ಈಗಲೂ ಅಷ್ಟೆ. ಪತಿಯೆಂಬ ಪ್ರಾಣಿಯನ್ನು ಪಳಗಿಸುವವರೆಗೆ ಸಹನೆ ಅವಶ್ಯ.

ಪಿ. ಶಂಕರಪ್ಪ, ಶಿವಮೊಗ್ಗ
ಡಿಸೆಂಬರ್ 31, ಜನವರಿ 1ರಂದು ಕುಡಿದು, ಕುಣಿದು ಅವಘಡಕ್ಕೆ ತುತ್ತಾಗುವುದಕ್ಕೆ ಕೊನೆ ಎಂದು?
ಆ ಎರಡೂ ದಿನಗಳು ಎಲ್ಲಿಯೂ ಮದ್ಯ ಸಿಗದಂತೆ ಮಾಡಿದಂದು.

ಜವಳಿ ಜಯಣ್ಣ, ದಾವಣಗೆರೆ
ಹಾವಿನ ಹುತ್ತಕ್ಕೂ, ಸಂಶಯದ ಹುತ್ತಕ್ಕೂ ಏನು ವ್ಯತ್ಯಾಸ?



ಹಾವಿನ ಹುತ್ತ ನೀರೆರೆದರೆ ನಶಿಸುತ್ತದೆ; ಸಂಶಯದ ಹುತ್ತ ನೀರೆರೆದರೆ ಬೆಳೆಯುತ್ತದೆ.

ಮಹಾವೀರ ಕಾಸರ, ಶಿವಮೊಗ್ಗ
‘ತಿರುವಿಗೊಮ್ಮೆ ಎತ್ತನ್ನು, ತಿಂಗಳಿಗೊಮ್ಮೆ ಹೆಂಡತಿಯನ್ನು ಬಡಿ’ ಎಂಬುದು ಈಗಿನ ಕಾಲಕ್ಕೆಷ್ಟು ಸೂಕ್ತ?
ಪ್ರಾಣಿದಯಾ ಸಂಘ, ಮಹಿಳಾಸಂಘಗಳು ನಿಮ್ಮನ್ನು ಜೈಲಿಗಟ್ಟುವಷ್ಟರ ಮಟ್ಟಿಗೆ.

ರಾಜಶೇಖರ ಹಾದಿಮನಿ, ಧಾರವಾಡ
ಗಣೇಶ, ಲಕ್ಷ್ಮಿ, ಸರಸ್ವತಿ; ಈ ಮೂವರಲ್ಲಿ ನೀವು ಯಾರಿಗೆ ಮೊದಲು ಪೂಜೆ ಸಲ್ಲಿಸುತ್ತೀರಿ?
ಮಂತ್ರ ಹೇಳುವುದನ್ನು, ಹಣ ಎಣಿಸುವುದನ್ನು ಹೇಳಿಕೊಡುವ ಸರಸ್ವತಿಗೇ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಹುಡುಗನ ಪ್ರೀತಿ ಕೊಳಾಯಿ ನೀರು ಇದ್ದಂತೆ. ಹೆಣ್ಣಿನ ಪ್ರೀತಿ?
ಹುಡುಗ ಸಮ್ಮತವಾದರೆ ಬಕೆಟ್; ಇಲ್ಲವಾದರೆ ಗಲಿ ಟ್ರ್ಯಾಪ್.

ಗಂಗಾದೇವಿ, ಬೆಂಗಳೂರು
ಮಾರುಕಟ್ಟೆಯ ಸರಕುಗಳ ಬೆಲೆ 99ರಿಂದಲೇ ಕೊನೆಗೊಳ್ಳುವ ರಹಸ್ಯವೇನು?
ಗಿರಾಕಿಗೆ ಮೊತ್ತವಾಗಿ ಸಂತೋಷ ಸಿಗದಿದ್ದರೂ ಚಿಲ್ಲರೆ ಸಂತೋಷವಾದರೂ ಇರಲೆಂದು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಹೆಂಡತಿಯ ಸೀರೆ, ಕುಪ್ಪಸಗಳನ್ನು ಅವಳ ಗಂಡ ಒಗೆದುಕೊಡುವುದು ತಪ್ಪೇ ಸಾರ್?
ಶುದ್ಧ ತಪ್ಪು! ಒಗೆದು ಕೊಡಬಾರದು; ಒಗೆದು, ಇಸ್ತ್ರಿ ಮಾಡಿ ಬೀರುವಿನಲ್ಲಿ ಜೋಡಿಸಿಡಬೇಕು.

ಎಂ.ಸಿ. ಧನ್ಯತಾ, ಬೆಂಗಳೂರು
ನಿಜವಾದ ನಾಯಕ ಹೇಗಿರಬೇಕು?
ನಾ–ನಾಳೆಗಳ; ಯ–ಯಶೋಮಾರ್ಗಕ್ಕೆ; ಕ–ಕಟಿಬದ್ಧನಾಗಿರಬೇಕು.

ಎಸ್ಸೆನ್ ಮಹಾಬಲರಾವ್, ಎನ್ನಾರ್ಪುರ
ಉಸಿರು ಹೋದರೂ ಹೆಸರಿರಬೇಕು?
ನಿಜ. ಬ್ಲ್ಯಾಂಕ್ ಡೆತ್ ಸರ್ಟಿಫಿಕೇಟ್ ಕೊಡಲು ಆಗುವುದಿಲ್ಲವಲ್ಲ.

ಮಂಜುನಾಥ ಕೆ.ಪಿ. ಕೆ.ಟಿ.ಹಳ್ಳಿ
ಪಾನಪ್ರಿಯರು ಸಿರಿವಂತರೋ, ಬಡವರೋ?
ಎರಡೂ ಅಲ್ಲ; ‘ಸೆರೆ’ವಂತ ಭಡವರು.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ಹೆಂಡತಿಯು ಗಂಡನನ್ನು ದೇವರೆಂದು ಕರೆಯುವುದೇಕೆ?
ಎಷ್ಟು ಕರೆದರೂ ಓಗೊಡದೆ ಮಾಯವಾಗುವ ಗುಣವಿದೆಯಲ್ಲ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಕಣ್ಣಿಗೆ ರಕ್ಷಣೆ ರೆಪ್ಪೆ. ಹೆಣ್ಣಿಗೆ?
ಅವಳ ಪ್ರತಿ ಇಶಾರೆಗೂ ಜೀ ಜೀ ಎನ್ನುವ ಬೆಪ್ಪೇ!

## ಬಹುಮಾನಿತ ಪ್ರಶ್ನೆ

ಆರ್. ಮಧುಸೂದನ್, ಹಾಸನ
ಮೊಬೈಲ್ ನೋಡಿಕೊಂಡು ಆಂಬುಲೆನ್ಸ್ ಓಡಿಸುವವರಿಗೆ ನಿಮ್ಮ ಕಿವಿಮಾತೇನು?
ಮೊಬೈಲ್‌ನ ಜಿಪಿಎಸ್ ‘ಅರೈವಿಂಗ್ ಇನ್ ಸ್ವರ್ಗ ಸೂನ್’ ಎಂದೀತು, ಎಚ್ಚರ!

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು
ಕರ್ನಾಟಕದ ಮತದಾರರು ಬುದ್ಧಿ ಬಳಸಿ ಮತ ಚಲಾಯಿಸಿದ್ದು ಯಾವ ಇಸವಿಯಲ್ಲಿ ರಾಂ?
ವಿದ್ಯುತ್ತಿಲ್ಲದೆ ಹೆಚ್ಚಾಗಿ ಬುಡ್ಡಿ ಬಳಸುತ್ತಿದ್ದ ಸವಿ ಇಸವಿಗಳಲ್ಲಿ.

ಪಿ.ಜೆ. ರಾಘವೇಂದ್ರ, ಮೈಸೂರು
ನ್ಯೂಸ್ ಪೇಪರ್‌ಗೆ ರಜೆ ಇರುತ್ತದೆ. ನ್ಯೂಸ್ ಚಾನಲ್ಲಿಗೇಕಿಲ್ಲ?
ಪೇಪರ್‌ನವರು ಹಬ್ಬ ಬೇಕು ಎನ್ನುತ್ತಾರೆ. ಚಾನಲ್ ಕೇವಲ ಹಬ್ಬಬೇಕು ಎನ್ನುತ್ತದೆ.

ಜೀವಿ, ಗೊಂಡೇದಹಳ್ಳಿ
ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು. ಒಲ್ಲದ ಹೆಂಡತಿಗೆ?



ವಿಚ್ಛೇದನದ ಸೊಲ್ಲು!

ಮಲ್ಲಿಕಾರ್ಜುನ, ಸುರಧೇನುಪುರ
ಕರ್ನಾಟಕದಲ್ಲಿ ಸುಲಿಗೆದಾರರ ಸಂಘ ಇದೆಯೆ?
ಹೂಂ. ಎಲ್ಲ ಸರ್ಕಾರಿ ಕಚೇರಿಗಳಲ್ಲಿಯೂ ಆ ಸಂಘದ ಸದಸ್ಯರಿದ್ದಾರೆ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಗಿಡ ಮರಕ್ಕೆ ಬೇರು ಮುಖ್ಯ. ರಾಜಕೀಯ ಪಕ್ಷಕ್ಕೆ?
ಕುಬೇರ.

ಜಗದೀಶ ಬಿ. ಹೊಸೂರು, ಮೈಸೂರು
ರಾಜಕಾರಣಿಗಳ ಪಗಡೆಯಾಟ ಶ್ರೀಸಾಮಾನ್ಯರಿಗೆ ಅರ್ಥವಾಗುವುದು ಯಾವಾಗ?
ಕುರಿಗಳು ತಲೆ ತಗ್ಗಿಸಿರುವವರೆಗೆ ತೋಳದ ಆಟ ಅರಿವಾಗುವುದು ಅಸಾಧ್ಯ.

■ ರಾಮ್